# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 32 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 19-12-2022 |
| ಉತ್ತರಿಸುವ ಸಚಿವರು | : ಪ್ರವಾಸೋದ್ಯಮ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕು ಜಮಲಬಾದ್ ಕೋಟ್ ಚಂದ್ಕೂರು ದೇವಸ್ಥಾನದ ಬಳಿ ಇರುವ ಪ್ರವಾಸೋದ್ಯಮ ಇಲಾಖೆಯ ವಸತಿ ಗೃಹದ ನಿರ್ಮಾಣ ಕಾಮಗಾರಿಯು ಯಾವ ವರ್ಷದಲ್ಲಿ ಪ್ರಾರಂಭವಾಗಿದೆ; | ಪ್ರವಾಸೋದ್ಯಮ ಇಲಾಖೆಯಿಂದ 2015-16ನೇ ಸಾಲಿನಲ್ಲಿ ಬಂಡವಾಳ ವೆಚ್ಚಗಳ ಅಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ನಡ ಗ್ರಾಮದ ಜಮಲಾಬಾದ್ ಕೋಟೆ ಪ್ರದೇಶದಲ್ಲಿ 10 ಕೊಠಡಿಗಳ ಯಾತ್ರಿನಿವಾಸ ನಿರ್ಮಾಣ ಕಾಮಗಾರಿಯನ್ನು ರೂ.40.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ದಿನಾಂಕ: 18-08-2015 ರಂದು ಸರ್ಕಾರದಿಂದ ಅನುಮೋದನೆ ನೀಡಲಾಗಿದೆ.<br><br>ಸದರಿ ಕಾಮಗಾರಿಯನ್ನು ರೂ.40.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಜಿಲ್ಲಾ ನಿರ್ಮಿತಿ ಕೇಂದ್ರ, ದಕ್ಷಿಣ ಕನ್ನಡ ರವರಿಗೆ ದಿನಾಂಕ: 13.06.2018ರಂದು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತಾರೆ ಹಾಗೂ ಕಾಮಗಾರಿ ಪ್ರಾರಂಭಿಸಲಾಗಿದೆ. |
| ಆ) | ಸದರಿ ವಸತಿಗೃಹ ಕಾಮಗಾರಿ ಯಾವ ಹಂತದಲ್ಲಿದೆ, ಕಾಮಗಾರಿಯು ಬಾಕಿ ಉಳಿಯಲು ಕಾರಣವೇನು; ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು; (ವಿಸ್ತೃತವಾದ ವರದಿಯನ್ನು ನೀಡುವುದು) | ಸದರಿ ಕಾಮಗಾರಿಯ ಕಟ್ಟಡದ ಒಳಭಾಗದ ಗಾರೆಕೆಲಸ ಪೂರ್ಣಗೊಂಡಿದೆ ಎಂದು ಕಾರ್ಯನಿರ್ವಾಹಕ ನಿರ್ದೇಶಕರು, ದಕ್ಷಿಣ ಕನ್ನಡ ನಿರ್ಮಿತಿ ಕೇಂದ್ರ, ಸುರತ್ಕಲ್ ರವರು ವರದಿ ಸಲ್ಲಿಸಿರುತ್ತಾರೆ.<br><br>ಪ್ರವಾಸೋದ್ಯಮ ಇಲಾಖೆಗೆ ಕೋವಿಡ್-19ರ ಹಿನ್ನಲೆಯಲ್ಲಿ, 2020-21 ಮತ್ತು 2021-22ನೇ ಸಾಲುಗಳಲ್ಲಿ ಬಂಡವಾಳ ವೆಚ್ಚಗಳ ಲೆಕ್ಕಶೀರ್ಷಿಕೆಯಡಿಯಲ್ಲಿ ಕ್ರಮವಾಗಿ ರೂ.35.00 ಕೋಟಿ ಹಾಗೂ ರೂ.71.00 ಕೋಟಿಗಳನ್ನು ಮಾತ್ರ ಒದಗಿಸಿದ್ದು, ಸದರಿ ಲೆಕ್ಕಶೀರ್ಷಿಕೆಯಡಿಯಲ್ಲಿ ಎರಡು ಸಾಲುಗಳಲ್ಲಿ 900ಕ್ಕೂ ಅಧಿಕ ಮುಂದುವರೆದ ಕಾಮಗಾರಿಗಳಿದ್ದು, ಈ ಪೈಕಿ ಪೂರ್ಣಗೊಂಡಿರುವ ಹಾಗೂ ಪೂರ್ಣಗೊಳ್ಳುವ ಹಂತದಲ್ಲಿರುವ ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಆದುದರಿಂದ, 2020-21 ಮತ್ತು 2021-22ನೇ ಸಾಲುಗಳಲ್ಲಿ ಅನುದಾನದ ಕೊರತೆಯಿಂದ ಸದರಿ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ.<br><br>ಸದರಿ ಕಾಮಗಾರಿಗೆ ಇಲಾಖೆಯಿಂದ ಮೊದಲ ಕಂತಾಗಿ ರೂ.20.00 ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ಅದರನ್ವಯ ಕಾಮಗಾರಿ ಕೈಗೊಂಡಿದ್ದು, ರೂ.20.00 ಲಕ್ಷಗಳಿಗೆ ಅನುಷ್ಠಾನ ಸಂಸ್ಥೆಯವರು ಹಣಬಳಕೆ ಪ್ರಮಾಣಪತ್ರ, ಛಾಯಾಚಿತ್ರಗಳು, ಚೆಕ್ ಲಿಸ್ಟ್ ಮತ್ತು 3ನೇ ವ್ಯಕ್ತಿಯ ತಪಾಸಣಾ ವರದಿಯನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ದಕ್ಷಿಣ ಕನ್ನಡ ಜಿಲ್ಲೆ ರವರು ಸಲ್ಲಿಸಿದ್ದು, ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. |
| ಇ) | 2018ರ ಬಳಿಕ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾದ ಕಾಮಗಾರಿಗಳಾವುವು; ಇವುಗಳು ಯಾವ ಯಾವ ಹಂತದಲ್ಲಿವೆ? | ಕಾಮಗಾರಿಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |

TOR 312 TDV 2022

(ಆನಂದ್ ಸಿಂಗ್)
ಪ್ರವಾಸೋದ್ಯಮ,
ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

ಅನುಬಂಧ

## ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಂಜೂರಾದ ಕಾಮಗಾರಿಗಳ ವಿವರ

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ ಯೋಜನೆ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2022ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | **ದಕ್ಷಿಣ ಕನ್ನಡ ಜಿಲ್ಲೆ** | | | | | |
| | **ಬೆಳ್ತಂಗಡಿ ತಾಲ್ಲೂಕು** | | | | | |
| 1 | ಬೆಳ್ತಂಗಡಿ ತಾಲ್ಲೂಕಿನ ಅರಸಿನಮಕ್ಕಿ ಎಂಬಲ್ಲಿ ಸಯ್ಯದ್ ಬೀರಾನ್ ಚಿಸ್ತಿ ಹಾಗೂ ನಾಝೀಮ್ ಚಿಸ್ತಿ ಹೆಸರಿನಲ್ಲಿ ಎರಡು ಗೋರಿಗಳ ಬಳಿ ಯಾತ್ರಿನಿವಾಸ ನಿರ್ಮಾಣ. | 2017-18 ಬಂಡವಾಳ ವೆಚ್ಚಗಳು | 25.00 | ಕೆಆರ್ಐಡಿಎಲ್ | 25.00 | ಕಾಮಗಾರಿ ಪೂರ್ಣಗೊಂಡಿದೆ |
| 2 | ಬೆಳ್ತಂಗಡಿ ತಾ. ಸುಲ್ಕೇರಿ ಗ್ರಾಮದ ಮಾಳಿಗೆ-ಕದಿರಾಜೇಶ್ವರ ದೇವಸ್ಥಾನ ಸಂಪರ್ಕ ರಸ್ತೆ. | 2019-20 ಬಂಡವಾಳ ವೆಚ್ಚಗಳು | 25.00 | ಲೋಕೋಪಯೋಗಿ ಇಲಾಖೆ | 8.00 | ಕಾಮಗಾರಿ ಪೂರ್ಣಗೊಂಡಿದೆ |
| 3 | ಬೆಳ್ತಂಗಡಿ ತಾ. ಶಿಶಿಲ ಗ್ರಾಮದ ಒಟ್ಲ ಶ್ರೀ ಬ್ರಹ್ಮಬೈದರ್ಕಳ ಗರಡಿ ಸಂಪರ್ಕ ರಸ್ತೆ. | 2019-20 ಬಂಡವಾಳ ವೆಚ್ಚಗಳು | 25.00 | ಲೋಕೋಪಯೋಗಿ ಇಲಾಖೆ | 8.00 | ಕಾಮಗಾರಿ ಪೂರ್ಣಗೊಂಡಿದೆ |
| 4 | ಬೆಳ್ತಂಗಡಿ ತಾ. ಗರ್ಡಾಡಿ ಗ್ರಾಮದ ನಂದಿಬೆಟ್ಟದಿಂದ ಶ್ರೀ ನಂದಿಕೇಶ್ವರ ದೇವಸ್ಥಾನ ಸಂಪರ್ಕ ರಸ್ತೆ. | 2019-20 ಬಂಡವಾಳ ವೆಚ್ಚಗಳು | 25.00 | ಲೋಕೋಪಯೋಗಿ ಇಲಾಖೆ | 8.00 | ಕಾಮಗಾರಿ ಪೂರ್ಣಗೊಂಡಿದೆ |
| 5 | ಬೆಳ್ತಂಗಡಿ ತಾಲ್ಲೂಕಿನ ಮಲವಂತಿಕೆ ಗ್ರಾಮದ ಫಾಲ್ಸ್‌ನ್ನು ಪ್ರವಾಸೋದ್ಯಮ ಕ್ಷೇತ್ರವಾಗಿ ಗುರುತಿಸಿ, ಅಭಿವೃದ್ಧಿಪಡಿಸುವುದು. | 2019-20 ಬಂಡವಾಳ ವೆಚ್ಚಗಳು | 150.00 | ಕೆಆರ್ಐಡಿಎಲ್ | 50.00 | ಕಾಮಗಾರಿ ಪ್ರಗತಿಯಲ್ಲಿದೆ |
| 6 | ಬೆಳ್ತಂಗಡಿ ತಾಲ್ಲೂಕಿನ ಉಜಿರೆ ಗ್ರಾಮದ ಸೂರ್ಯನಾರಾಯಣ ದೇವಸ್ಥಾನಕ್ಕೆ ಸಂಪರ್ಕ ರಸ್ತೆ ಅಭಿವೃದ್ಧಿಗೊಳಿಸುವ ಕಾಮಗಾರಿ | 2018-19 ಬಂಡವಾಳ ವೆಚ್ಚಗಳು | 50.00 | ಲೋಕೋಪಯೋಗಿ ಇಲಾಖೆ | 25.00 | ಕಾಮಗಾರಿ ಪೂರ್ಣಗೊಂಡಿದೆ |
| 7 | ಬೆಳ್ತಂಗಡಿ ತಾಲ್ಲೂಕಿನ ಶಿಶಿಲ ಗ್ರಾಮದ ಶಿಶಿಲೇಶ್ವರ ದೇವಸ್ಥಾನದ ಬಳಿ ಶೌಚಾಲಯ ನಿರ್ಮಾಣ. | 2018-19 ಬಂಡವಾಳ ವೆಚ್ಚಗಳು | 25.00 | ಲೋಕೋಪಯೋಗಿ ಇಲಾಖೆ | 15.00 | ಕಾಮಗಾರಿ ಪೂರ್ಣಗೊಂಡಿದೆ |
| 8 | ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡ ಗ್ರಾಮದ ಸೌತಡ್ಕ ಮಹಾಗಣಪತಿ ದೇವಸ್ಥಾನದ ಬಳಿ ಶೌಚಾಲಯ | 2018-19 ಬಂಡವಾಳ ವೆಚ್ಚಗಳು | 25.00 | ಲೋಕೋಪಯೋಗಿ ಇಲಾಖೆ | 15.00 | ಕಾಮಗಾರಿ ಪ್ರಗತಿಯಲ್ಲಿದೆ |
| 9 | ಬೆಳ್ತಂಗಡಿ ತಾಲ್ಲೂಕಕಿನ ಶ್ರೀ ಕ್ಷೇತ್ರ ಧರ್ಮಸ್ಥಳದ ಸ್ನಾನಘಟ್ಟ ಅಭಿವೃದ್ಧಿ ಕಾಮಗಾರಿ **(ಕೆಟಿವಿಜಿ)** | 2019-20 | 464.52 | ಲೋಕೋಪಯೋಗಿ ಇಲಾಖೆ | 362.00 | ಕಾಮಗಾರಿ ಪ್ರಗತಿಯಲ್ಲಿದೆ |
| | **ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು :** | | 814.52 | | 516.00 | |